**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಎಂಟನೇ ಅಧಿವೇಶನ**

# ಕರ್ನಾಟಕ ಲಘು ವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ - 25)**

ಕರ್ನಾಟಕ ಲಘು ವಿವಾದ ನ್ಯಾಯಾಲಯಗಳ ಅಧಿನಿಯಮ, 1964 ಮತ್ತು ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲಘು ವಿವಾದ ನ್ಯಾಯಾಲಯಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 11) ಮತ್ತು ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಲಘು ವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1964ರ ಕರ್ನಾಟಕ ಅಧಿನಿಯಮ 11ರ ತಿದ್ದುಪಡಿ.-** ಕರ್ನಾಟಕ ಲಘು ವಿವಾದ ನ್ಯಾಯಾಲಯಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 11) 8ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದಲ್ಲಿ,-

(ಎ) "ಒಂದು ಲಕ್ಷ ರೂಪಾಯಿಗಳನ್ನು" ಎಂಬ ಪದಗಳಿಗೆ "ಎರಡು ಲಕ್ಷ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಇಪ್ಪತ್ತೈದು ಸಾವಿರ ರೂಪಾಯಿಗಳನ್ನು" ಎಂಬ ಪದಗಳಿಗೆ "ಒಂದು ಲಕ್ಷ ರೂಪಾಯಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 1964ರ ಕರ್ನಾಟಕ ಅಧಿನಿಯಮ 21ರ ತಿದ್ದುಪಡಿ.-** ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 21) 22ನೇ ಪ್ರಕರಣದಲ್ಲಿ, "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳಿಗೆ "ಬೆಂಗಳೂರು ನಗರದಲ್ಲಿ ಎರಡು ಲಕ್ಷ ರೂಪಾಯಿಗಳವರೆಗೆ ಮತ್ತು ಇತರ ಸ್ಥಳಗಳಲ್ಲಿ ಒಂದು ಲಕ್ಷ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳನ್ನು ವ್ಯತ್ಯಸ್ಥಗೊಳಿಸತಕ್ಕದ್ದಲ್ಲ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ಲಘು ವಿವಾದ ನ್ಯಾಯಾಲಯಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2015ರ ಪ್ರಾರಂಭದ ದಿನಾಂಕದಂದು, ಲಘು ವ್ಯಾಜ್ಯ ನ್ಯಾಯಾಲಯಗಳು ಮತ್ತು ಸಿವಿಲ್ ನ್ಯಾಯಾಲಯಗಳ ಮುಂದೆ ಇತ್ಯರ್ಥಕ್ಕೆ ಬಾಕಿ ಇರುವ ಎಲ್ಲಾ ದಾವೆಗಳು ಮೇಲ್ಮನವಿಗಳು ಅಥವಾ ರಿವಿಷನ್ ಮತ್ತು ಅದಕ್ಕೆ ಸಂಬಂಧಿಸಿದ ಇತರ ವ್ಯವಹರಣೆಗಳು ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯನ್ನು ಮಾಡದಿದ್ದರೆ ಹೇಗೋ ಹಾಗೆ ಅವು ಇತ್ಯರ್ಥಕ್ಕೆ ಬಾಕಿ ಇರುವ ಸದರಿ ನ್ಯಾಯಾಲಯಗಳಲ್ಲಿಯೇ ಮುಂದುವರೆಯತಕ್ಕದ್ದು ಮತ್ತು ವಿಲೇಯಾಗತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯದಲ್ಲಿ ಲಘು ವಿವಾದಗಳ ನ್ಯಾಯಾಲಯಗಳ ಆರ್ಥಿಕ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಲು ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಲಘು ವಿವಾದ ನ್ಯಾಯಾಲಯಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 11) ಮತ್ತು ಆನುಷಂಗಿಕವಾಗಿ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 21) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಟಿ.ಬಿ. ಜಯಚಂದ್ರ**
ಕಾನೂನು, ಸಂಸದೀಯ ವ್ಯವಹಾರಗಳು,
ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಲಘು ವಿವಾದ ನ್ಯಾಯಾಲಯಗಳ ಅಧಿನಿಯಮ, 1964ರ**

**(1964ರ ಕರ್ನಾಟಕ ಅಧಿನಿಯಮ 11) ಉದ್ಧೃತ ಭಾಗ**

Xx xx xx

**8. ಲಘು ವಿವಾದಗಳು ನ್ಯಾಯಾಲಯಗಳ ದಾವೆಗಳ ಸಂಜ್ಞೇಯತೆ.–** (1) ಲಘು ವಿವಾದಗಳ ನ್ಯಾಯಾಲಯಗಳ ಸಂಜ್ಞೇಯತೆಯಿಂದ ದಾವೆಗಳನ್ನು ಹೊರತುಪಡಿಸಿರುವುದರಿಂದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ದಾವೆಗಳ ಸಂಜ್ಞೇಯತೆಯನ್ನು ಲಘು ವಿವಾದಗಳ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

(2) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಹೊರತುಪಡಿಸುವಿಕೆಗೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಬೆಂಗಳೂರು ನಗರದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಇತರ ಸ್ಥಳಗಳಲ್ಲಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದ, ಮೌಲ್ಯದ ಸಿವಿಲ್ ಸ್ವರೂಪದ ಎಲ್ಲಾ ದಾವೆಗಳು ಲಘು ವಿವಾದಗಳ ನ್ಯಾಯಾಲಯದಲ್ಲಿ ಸಂಜ್ಞೇಯವಾಗಿರತಕ್ಕದ್ದು.

Xx xx xx

**ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ರ**

**(1964ರ ಕರ್ನಾಟಕ ಅಧಿನಿಯಮ 21) ಉದ್ಧೃತ ಭಾಗ**

Xx xx xx

**22. ಲಘು ವಿವಾದ ಅಧಿಕಾರಗಳೊಂದಿಗೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಅಧಿಕಾರವನ್ನು ನಿಹಿತಗೊಳಿಸುವುದು.–** (1) ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ ತಾನು ಕಾಲಕಾಲಕ್ಕೆ ನಿರ್ಧರಿಸತಕ್ಕ ಅಂಥ ಮಿತಿಗಳೊಳಗೆ, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ಲಘು ವಿವಾದಗಳ ನ್ಯಾಯಾಲಯವು ಸಂಜ್ಞೇಯಗೊಳಿಸುವ ದಾವೆಗಳ ಅಧಿವಿಚಾರಣೆಗಾಗಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ನಿಹಿತಗೊಳಿಸತಕ್ಕದ್ದು.

(2) ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ ಹಾಗೆ ನಿಹಿತಗೊಳಿಸಿದ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಅಂಥ ಅಧಿಕಾರ ವ್ಯಾಪ್ತಿಯನ್ನು ತಾನು ಸರಿಯೆಂದು ಭಾವಿಸಿದಾಗಲೆಲ್ಲ ಹಿಂದೆಗೆದುಕೊಳ್ಳಬಹುದು ಅಥವಾ ಬದಲಾಯಿಸಬಹುದು.

Xx xx xx

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಪಿ7, ಕಾಸೂ , 750–ಪ್ರತಿಗಳು 1ನೇ ಜುಲೈ, 2015

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
EIGHTH SESSION

# THE KARNATAKA SMALL CAUSE COURTS AND CERTAIN OTHER LAW (AMENDMENT) BILL, 2015
## (L.A. Bill No. 25 of 2015)

A Bill further to amend the Karnataka Small Cause Courts Act, 1964 and the Karnataka Civil Courts Act, 1964

Whereas it is expedient further to amend the Karnataka Small Cause Courts Act, 1964 (Karnataka Act 11 of 1964) and the Karnataka Civil Courts Act, 1964 (Karnataka Act 21 of 1964) for the purposes hereinafter appearing;

Be it enacted by the Karnataka State Legislature in the sixty-sixth year of the Republic of India as follows:-

**1. Short title and commencement.-** (1) This Act may be called the Karnataka Small Cause Courts and certain other law (Amendment) Act, 2015.

(2) It shall come into force at once.

**2. Amendment of Karnataka Act 11 Of 1964.-** In the Karnataka Small Cause Courts Act, 1964 (Karnataka Act 11 of 1964) in Section 8,-

(i) in sub-section (2),-

(a) for the words "one lakh rupees", the words "two lakhs rupees" shall be substituted; and
(b) for the words "twenty five thousand rupees", the words "one lakh rupees" shall be substituted.

**3. Amendment of Karnataka Act 21 of 1964.-** In the Karnataka Civil Court Act, 1964 (Karnataka Act No. 21 of 1964), in section 22, for the words "twenty five thousand rupees" the words "two lakhs rupees in Bangalore city and one lakh rupees in other places" shall be substituted.

**4. Pending cases not to be affected.-** Notwithstanding anything contained in this Act, all suits, appeals or revision and other proceedings connected therewith pending before Small Cause Courts and Civil Courts, on the date of commencement of the Karnataka Small Cause Courts and Certain Other Law (Amendment) Act, 2015 shall be continued and disposed of by the said courts in which they are pending as if the amendment made under this Act has not been made".

## STATEMENT OF OBJECTS AND REASONS

It is considered necessary to amend the Karnataka Small Cause Courts Act, 1964 (Karnataka Act 11 of 1964) and consequentially the Karnataka Civil Court Act, 1964 (Karnataka Act 21 of 1964) to provide for enhancement of pecuniary jurisdiction of the small causes courts in the State.

Hence the Bill.

## FINANCIAL MEMORANDUM

There is no extra expenditure involved in the proposed legislative measure.

**T.B.JAYACHANDRA**
Minister for Law, Parliamentary Affairs,
Animal Husbandry and Muzarai

**M. GURURAJA**
Secretary
Karnataka Legislative Assembly

**ANNEXURE**

## EXTRACT FROM THE KARNATAKA SMALL CAUSE COURTS ACT, 1964 (KARNATAKA ACT 11 OF 1964)

**XX XX XX**

**8. Cognizance of suits by Courts of Small Causes.**— (1) A Court of Small Causes shall not take cognizance of the suits specified in the Schedule as suits excepted from the cognizance of a Court of Small Causes.

(2) Subject to the exception specified in the schedule and to the provisions of any law for the time being in force, all suits of civil nature of which the value does not exceed "one lakh rupees" in Bangalore City, "twenty five thousand rupees" in other places, shall be cognizable by a court of small causes.

**XX XX XX**

## EXTRACT FROM THE KARNATAKA CIVIL COURTS ACT, 1964 (KARNATAKA ACT 21 OF 1964)

**XX XX XX**

**22. Power to invest the court of the Senior Civil Judge with small cause powers**- (1) The High Court, may by notification, invest within such limits, as it shall from time to time, determine, the court of a Senior civil Judge with jurisdiction for the trial of suits cognizable by a court of small causes up to twenty five thousands rupees.

(2) The High Court, may by notification, withdraw or alter, whenever it thinks fit, such jurisdiction of the court of the Senior civil judge so invested.

**XX XX XX**

Government Press, Suvarna Soudha, Belagavi, P7, W.D., Copies 750, 1st July, 2015